ಶ್ರೀ ಪಿ. ರಾಂದೇವ್.— ಕಳಪೆ ಗೋಧಿ, ಸೋಜಿ, ಮೈದಾ ಇವುಗಳನ್ನು ಸರಬರಾಜು ಮಾಡಿರುವಂಥ ಫ್ಲೋರ್ ಮಿಲ್‌ಗಳು ಎನು ಇವೆ ಇವರ ಮೇಲೆ ಕ್ರಮ ತೆಗೆದುಕೊಳ್ಳುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ? ಬಂದಿದ್ದರೆ ಯಾವ ಹಂತದಲ್ಲಿ ಯಾರು ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ಹೇಳುವುದಕ್ಕೆ ಸಾಧ್ಯವೇ ?

ಶ್ರೀ ಬಸವಣ್ಣಪ್ಪ.— ಇದು ಸಾಗರ ತಾಲ್ಲೂಕಿಗೆ ಸಂಬಂಧಪಟ್ಟ ಪ್ರಶ್ನೆ. ಫ್ಲೋರ್ ಮಿಲ್‌ಗಳ ಬಗ್ಗೆ ಬೇರೆ ಪ್ರಶ್ನೆ ಕೇಳಿದರೆ, ಉತ್ತರ ಕೊಡುತ್ತೇನೆ. ವಿತರಣೆಯನ್ನು ಕ್ರಮಬದ್ಧವಾಗಿ ಫುಡ್ ಕಾರ್ಪೊರೇಷನ್ ಅವರು ಮಾಡಿದ್ದಾರೆ. ರಾಜ್ಯದಲ್ಲಿ ನಾವು **37** ಫ್ಲೋರ್ ಮಿಲ್‌ಗಳಿಗೆ **27** ಸಾವಿರ ಟನ್ ಗೋಧಿಯನ್ನು ಕೊಟ್ಟಿದ್ದೇವೆ. ಇವರು ಹಲ್ ಮಾಡಿದ ಮೇಲೆ 50 ಪರ್ಸೆಂಟನ್ನು ಜಾಯಿಂಟ್ ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್ ಅವರು ಲಿಫ್ಟ್ ಮಾಡಬೇಕು. ಇನ್ನು ಉಳಿದು ದ್ದನ್ನು ಫ್ಲೋರ್ ಸೇಲ್‌ಗೆ ಕೊಡುತ್ತಾರೆ. ಈ ರೀತಿ ಲಿಫ್ಟ್ ಮಾಡುವಾಗ ಮೊದಲು ಸ್ವಲ್ಪ ಕಳಪೆ ಸರಬರಾಜು ಬಗ್ಗೆ ದೂರು ಇತ್ತು; ಈಗ ಯಾವುದೂ ಕಳಪೆ ಇಲ್ಲ, ಎಲ್ಲವನ್ನೂ ಸರಿಪಡಿಸಲಾಗಿದೆ.

ಅಧ್ಯಕ್ಷರು.— ಪ್ರಶ್ನೆ : **685**, ಮಾನ್ಯ ಸದಸ್ಯರು ಗೈರು ಹಾಜರಿ.

ವಿಷಯ : ಚಿತ್ರದುರ್ಗ ಜಿಲ್ಲೆಯಲ್ಲಿ ಕುಷ್ಠರೋಗದಿಂದ ನರಳುತ್ತಿರುವವರ ಸಂಖ್ಯೆ

ಪ್ರಶ್ನೆ. 245 (687) ಶ್ರೀ ಎನ್. ಜಿ. ನಾಯಕ್ (ಮೊಳಕಾಲ್ಮೂರು) — ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಚಿತ್ರದುರ್ಗ ಜಿಲ್ಲೆಯಲ್ಲಿ 1980-81, 82-83 ರಲ್ಲಿ ಇದ್ದ ಕುಷ್ಠರೋಗದಿಂದ ನರಳುತ್ತಿದ್ದವರ ಸಂಖ್ಯೆ ಎಷ್ಟು;

ಆ) ಈ ವಿಷಯದಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮವೇನು;

ಇ) ಮೊಳಕಾಲ್ಮೂರು ಕ್ಷೇತ್ರದಲ್ಲಿ ಯಾವ ಸ್ಥಳದಲ್ಲಿ ಹೆಚ್ಚಾಗಿ ಕುಷ್ಠ ರೋಗಿಗಳಿದ್ದಾರೆ;

ಈ) ಈ ಬಗ್ಗೆ ಸರ್ಕಾರದವರು ಕೈಗೊಳ್ಳಲು ಉದ್ದೇಶಿಸಿರುವ ಕ್ರಮವೇನು ?

ಉತ್ತರ : ಶ್ರೀ ಪಿ. ಜಿ. ಆರ್. ಸಿಂಧ್ಯ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು).— ಅ) 1980-81—1,787 1981-82—1,985 1982-83—2,411

ಆ) 1. ಕುಷ್ಠ ರೋಗದಿಂದ ನರಳುತ್ತಿರುವವರನ್ನು ಪತ್ತೆ ಹಚ್ಚಿ ಸೂಲಂಕುಷವಾಗಿ ಪರೀಕ್ಷಿಸುವುದು.

2. ಜನರಿಗೆ ರೋಗದ ಬಗ್ಗೆ ಸರಿಯಾದ ಹಾಗೂ ಸೂಕ್ತ ತಿಳುವಳಿಕೆ ನೀಡಿ ವೈದ್ಯರಲ್ಲಿ ಪರೀಕ್ಷಿಸಿಕೊಳ್ಳುವಂತೆ ಸಲಹೆ ನೀಡುವುದು.

3. ಪತ್ತೆ ಹಚ್ಚಿದ ಕುಷ್ಠ ರೋಗಿಗಳಿಗೆ ಸಕಾಲದಲ್ಲಿ ತಕ್ಕ ಔಷಧೋಪಚಾರ ನೀಡಿ ರೋಗವು ಗುಣವಾಗುವಂತೆ ಏರ್ಪಾಡು ಮಾಡುವುದು.

ಇ) 1. ನಾಗಸಮುದ್ರ—68 2. ನೆಲಸಮುದ್ರ—51 3. ಗೊಂತಲಹಳ್ಳಿ—41 4. ವಿ ವಿ ಕೆರೆ—64 5. ರೊಪ್ಪ—32 6. ಮೊಳಕಾಲ್ಮೂರು—23. ಮೇಲ್ಕಂಡ ಗ್ರಾಮದಲ್ಲಿರುವ ಕುಷ್ಠ ರೋಗಿಗಳಿಗೆ ವಿವಿಧ ಔಷಧೋಪಚಾರಗಳನ್ನು ನೀಡಲಾಗುತ್ತಿದೆ.

ಈ) ಉಲ್ಬಣವಿದ್ದ ರೋಗಿಗಳಿಗೆ ಆಸ್ಪತ್ರೆಯಲ್ಲಿ ಸೇರಿಸಿಕೊಂಡು ತಕ್ಕ ಔಷಧೋಪಚಾರಗಳನ್ನು ನೀಡಲಾಗುತ್ತಿದೆ.

ಶ್ರೀ ಎನ್. ಜಿ. ನಾಯಕ್.— ಮಾನ್ಯ ಸಚಿವರು ಹೇಳುವಂಥ ಉತ್ತರದಿಂದಲೇ ವರ್ಷ ವರ್ಷ ಈ ರೋಗ ಜಾಸ್ತಿಯಾಗುತ್ತಾ ಬಂದಿರುವುದನ್ನು ಕಾಣುತ್ತಿದ್ದೇವೆ. ಈ ರೋಗವನ್ನು ತಡೆಗಟ್ಟುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಸ್ವಾಮಿ ಕುಷ್ಠರೋಗ ಹೆಚ್ಚುತ್ತಿರುವುದು ನಿಜ. ಆದರ ಬಗ್ಗೆ ಭಿನ್ನಾಭಿಪ್ರಾಯ ಇಲ್ಲ. ಆದರೆ ಚಿತ್ರದುರ್ಗ ಜಿಲ್ಲೆಯನ್ನು ಬೇರೆ ಜಿಲ್ಲೆಗೆ ಹೋಲಿಕೆ ಮಾಡಿ ನೋಡಿದರೆ, ಅಷ್ಟು ತೀವ್ರಗತಿಯಲ್ಲಿ ಕುಷ್ಠರೋಗ ಹರಡುತ್ತಿಲ್ಲ. ಈ ವಿಚಾರದಲ್ಲಿ ಜನಗಳಲ್ಲಿ ತಿಳುವಳಿಕೆ ಹೆಚ್ಚು ಮಾಡಬೇಕಾಗಿದೆ. ರೋಗ ಪ್ರಾರಂಭವಾಗುವ ಮೊದಲ ಹಂತದಲ್ಲಿ ರೋಗಿಗಳು ಆಸ್ಪತ್ರೆಗೆ ಬಂದರೆ, ಕಾಯಿಲೆಯನ್ನು ಸಂಪೂರ್ಣವಾಗಿ ವಾಸಿ ಮಾಡಬಹುದು. ಇದರಲ್ಲಿ ಮಾನ್ಯ ಸದಸ್ಯರುಗಳ ಸಹಕಾರವು ಇರಬೇಕು. ರೋಗವನ್ನು ತಡೆಗಟ್ಟುವುದಕ್ಕಾಗಿ ಎಲ್ಲಾ ರೀತಿಯ ಸೌಲಭ್ಯಗಳನ್ನು ಕೊಡುವುದಕ್ಕೆ ತಯಾರಿದ್ದೇವೆ. ವಿಶೇಷವಾದ ಪ್ರಚಾರ ಮಾಡಿಸುವುದಕ್ಕಾಗಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ.ಜಿ. ಮಹೇಶ್ವರಪ್ಪ.— ಹರಿಹರ ತಾಲ್ಲೂಕಿನ ಕೊಂಡಜ್ಜಿ ಹತ್ತಿರ ಇರುವ ಅರಣ್ಯ ಪ್ರದೇಶದಲ್ಲಿ ಕುಷ್ಠರೋಗ ಚಿಕಿತ್ಸಾ ಕೇಂದ್ರ ಇದೆ. ಅಲ್ಲಿ ವಿಶೇಷವಾಗಿ ಚಿಕಿತ್ಸಾ ಸೌಕರ್ಯಗಳನ್ನು ಒದಗಿಸುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಈಗಾಗಲೇ ಹರಿಹರ ತಾಲ್ಲೂಕಿನಲ್ಲಿರುವ ಕೊಂಡಜ್ಜಿ ಎಂಬಲ್ಲಿ ಸಾರ್ವಜನಿಕ ಸಂಸ್ಥೆಯೊಂದು ಕುಷ್ಠರೋಗ ನಿವಾರಣೆ ಬಗ್ಗೆ ವ್ಯಾಪಕವಾದ ಕೆಲಸ ಮಾಡುತ್ತಿದೆ. ಈ

ಕೇಂದ್ರವನ್ನು ದಾವಣಗೆರೆಗೆ ವರ್ಗ ಮಾಡುವ ವಿಷಯವೂ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಎನ್.ಜಿ. ನಾಯಕ್.—ಸ್ವಾಮಿ, ನನ್ನ (ಇ) ಪ್ರಶ್ನೆಗೆ 289 ಸಂಖ್ಯೆ ಕೊಟ್ಟಿದ್ದಾರೆ. ಇದು ಸರಿಯಲ್ಲ. ನಾನು ಪ್ರತಿಯೊಂದು ಹಳ್ಳಿಗೂ ಹೋಗಿ ನೋಡಿದ್ದೇನೆ. ಹೆಚ್ಚಿನ ಜನಸಂಖ್ಯೆಯಲ್ಲಿ ಜನ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇದನ್ನು ತಡೆಗಟ್ಟುವ ದಿಸೆಯಲ್ಲಿ ಕಟ್ಟುನಿಟ್ಟಿನ ಕ್ರಮ ತೆಗೆದು ಕೊಳ್ಳುತ್ತೀರಾ? ಮತ್ತೆ ಆಮೆಗಲ್ ಪ್ರದೇಶದಲ್ಲಿ ಹೊಸ ಕೇಂದ್ರವನ್ನು ತೆಗೆಯುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಪಿ.ಜಿ.ಆರ್. ಸಿಂಧ್ಯ.— ಕೊಟ್ಟಿರತಕ್ಕ ಅಂಕಿ ಅಂಶ ಸರಿಯಲ್ಲವೆಂದು ಹೇಳುತ್ತಿದ್ದಾರೆ, ಆದರಲ್ಲಿ ಸತ್ಯಾಂಶ ಇರಬಹುದು. ಆರೋಗ್ಯ ಕಾರ್ಯಕರ್ತರು ಸ್ಥಳಕ್ಕೆ ಹೋದಾಗ ರೋಗಿಗಳು ಸಿಗದೇ ಇರುವಂಥ ಸಂದರ್ಭಗಳೂ ಉಂಟು. ಸರಿಯಾದ ಮಾಹಿತಿ ಸಂಗ್ರಹಿಸುವಂತೆ ಇನ್ನು 2–3 ದಿವಸದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೊಪ್ಪದ್ ಫಕೀರಪ್ಪ ಆಲಪ್ಪ.— ಸ್ವಾಮಿ, ರಾಮದುರ್ಗ ಮತ್ತು ಸವದತ್ತಿಯಲ್ಲೂ ಕುಷ್ಠ ರೋಗ ಆಸ್ಪತ್ರೆ ಇದೆ. ಅಲ್ಲಿ ದವಾಖಾನೆ ಇದ್ದರೂ ಡಾಕ್ಟರುಗಳು ಇಲ್ಲ. ಅಲ್ಲಿಗೆ ಡಾಕ್ಟರುಗಳನ್ನು ಕಳುಹಿಸುತ್ತೀರಾ?

ಶ್ರೀ ಪಿ ಜಿ ಆರ್ ಸಿಂಧ್ಯ.—ಮಾನ್ಯ ಸದಸ್ಯರು ನನಗೆ ಅನೇಕ ಬಾರಿ ಪ್ರತ್ಯೇಕವಾಗಿ ಬಂದು ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಿಗೆ ವೈದ್ಯರುಗಳು ಹೋಗುವುದಕ್ಕೆ ಹಿಂಜರಿಯುತ್ತಿದ್ದಾರೆ. ಇದರಲ್ಲಿ ಮಾನ್ಯ ಸದಸ್ಯರುಗಳ ಸಂಪೂರ್ಣ ಸಹಕಾರವನ್ನು ಕೋರುತ್ತಿದ್ದೇನೆ. ಹಳ್ಳಿಗಳಿಗೆ ವರ್ಗ ಮಾಡಿದರೆ ಏನಾದರೂ ಮಾಡಿ ಅದನ್ನು ವಜಾ ಮಾಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅನೇಕ ಸಂದರ್ಭಗಳಲ್ಲಿ ನಾನು ನಿಸ್ಸಹಾಯಕನಾಗಿದ್ದೇನೆ. ವೈದ್ಯರಲ್ಲಿರತಕ್ಕ ಪ್ರವೃತ್ತಿಯನ್ನು ನಿಲ್ಲಿಸ ಬೇಕಾದರೆ ಸದನದ ಎಲ್ಲ ಸದಸ್ಯರೂ ಸಹಕಾರವನ್ನು ಕೊಟ್ಟರೆ, 2–3 ತಿಂಗಳೊಳಗೆ ಹಳ್ಳಿಗಳಿಗೆ ವೈದ್ಯರನ್ನು ಕಳುಹಿಸುವ ವ್ಯವಸ್ಥೆ ಮಾಡಲಾಗುವುದು.

ಅಧ್ಯಕ್ಷರು.— ಪ್ರಶ್ನೋತ್ತರ ನೇಳೆ ಮುಗಿಯಿತು.

2. ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಎ. ಲಕ್ಷ್ಮೀಸಾಗರ್.— ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ವಿಷಯ : ಧಾರವಾಡ ಸಿವಿಲ್ ಆಸ್ಪತ್ರೆಯಲ್ಲಿ ಹಾಸಿಗೆ ಸಂಖ್ಯೆಯನ್ನು ಜಾಸ್ತಿ ಮಾಡುವ ಬಗ್ಗೆ.

ಪ್ರಶ್ನೆ : 244 (685) ಶ್ರೀ ಎಸ್.ಆರ್. ಮೋರೆ (ಧಾರವಾಡ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೇ :—

ಅ) ಧಾರವಾಡ ಸಿವಿಲ್ ಆಸ್ಪತ್ರೆಯಲ್ಲಿ ಇರುವ ಹಾಸಿಗೆಗಳ ಸಂಖ್ಯೆಯನ್ನು 150 ರಿಂದ 250ಕ್ಕೆ ಹೆಚ್ಚಿಸುವುದಾಗಿ ಕೊಟ್ಟಿದ್ದ ಆಶ್ವಾಸನೆ ಬಗ್ಗೆ ಸರಕಾರದವರು ಕೈಗೊಂಡ ಕ್ರಮವೇನು :

ಆ) ಮೇಲ್ಕಂಡ ಆಸ್ಪತ್ರೆಯಲ್ಲಿರುವ 'ಕ್ಷ' ಕಿರಣ ಯಂತ್ರವು ಸರಿಯಾಗಿ ಇಲ್ಲದ್ದರಿಂದ ಹೊಸ ಯಂತ್ರವನ್ನು ಪೂರೈಸುವುದಕ್ಕಾಗಿ ಕೈಗೊಳ್ಳಲಾದ ಕ್ರಮವೇನು ?

ಉತ್ತರ : ಪಿ ಜಿ.ಆರ್, ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಸಚಿವರು).—

(ಅ) ಸರ್ಕಾರದ ಪರಿಶೀಲನೆಯಲ್ಲಿದೆ.

ಆ) 'ಕ್ಷ' ಕಿರಣ ಯಂತ್ರವನ್ನು ದುರಸ್ತಿಗೊಳಿಸಿ ಚಾಲನೆಯಲ್ಲಿಡಲಾಗಿದೆ.

ವಿಷಯ : ಸರಕಾರದ ಸ್ವಾಮ್ಯದಲ್ಲಿರುವ ವಾಹನಗಳ ಸಂಖ್ಯೆ

ಪ್ರಶ್ನೆ : 173(653) ಶ್ರೀ ಬಿ. ಅಪ್ಪಣ್ಣ ಹೆಗಡೆ(ಬೈಂದೂರು).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಬಿಟ್ಟು ರಾಜ್ಯ ಸರ್ಕಾರದ ಸ್ವಾಧೀನದಲ್ಲಿರುವ ಒಟ್ಟು ವಾಹನಗಳ ಸಂಖ್ಯೆ ಎಷ್ಟು ; ಇಲಾಖಾವಾರು ವಿವರಗಳನ್ನು ತಿಳಿಸುವುದು ;

ಆ) ರಾಜ್ಯ ಸರ್ಕಾರದ ಸ್ವಾಮ್ಯ ಹೊಂದಿರುವ ಇತರ ಅಂಗ ಸಂಸ್ಥೆಗಳು ಅರ್ಥಾತ್ ನಿಗಮಗಳು, ಮಂಡಳಿಗಳು ಹೊಂದಿರುವ ವಾಹನಗಳ ಸಂಖ್ಯೆ ಎಷ್ಟು ;

(ಸಾರಿಗೆ ಸಂಸ್ಥೆ ಬಿಟ್ಟು)

ಇ) ಇವುಗಳ ನಿರ್ವಹಣೆಗೆ ತಗಲುವ ವಾರ್ಷಿಕ ವೆಚ್ಚವೆಷ್ಟು ;

ಈ) ಈ ವಾಹನಗಳನ್ನು ಸುಸ್ಥಿತಿಯಲ್ಲಿಡಲು ತಗಲುವ ವಾರ್ಷಿಕ ವೆಚ್ಚವೆಷ್ಟು ;